**JUNE 22, 2024**

# AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ 7 ಜಿಲ್ಲೆಗಳ, 64 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ; 13 ಸಾವಿರ ಉದ್ಯೋಗಗಳ ಸೃಷ್ಟಿ – ಎಂ.ಬಿ.ಪಾಟೀಲ.**
- **ವಿಪತ್ತು ನಿರ್ವಹಣೆ ಗುಣಮಟ್ಟ ಉನ್ನತೀಕರಣ; ಮೂರೂವರೆ ಸಾವಿರ ಕೋಟಿ ರೂಪಾಯಿ ಮೌಲ್ಯದ, ಹೊಸ ಯೋಜನೆ – ಕೃ ್ಣ ಬೈರೇಗೌಡ.**
- **ಹುಬ್ಬಳ್ಳಿಯ, ಕಿಮ್ಸ್ ಜೊತೆ, ಹೊಸ ದಿಲ್ಲಿಯ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ, ಒಡಂಬಡಿಕೆ – ಪ್ರಲ್ಹಾದ ಜೋಶಿ.**
- **ಶರಾವತಿ ಮುಳುಗಡೆ ಸಂತ್ರಸ್ಥರಿಗೆ, ಮಾನವೀಯ ನೆಲೆಯಲ್ಲಿ ನೆರವು ಒದಗಿಸಲು, ಮುಖ್ಯಮಂತ್ರಿಯವರು ಸಿದ್ಧ – ಮಧು ಬಂಗಾರಪ್ಪ.**

<><><>

**ಈಗ ವಾರ್ತೆಗಳ ವಿವರ**

<><><>

**ಏಕಗವಾಕ್ಷಿ ಅನುಮೋದನಾ ಸಮಿತಿ, ರಾಜ್ಯದ 7 ಜಿಲ್ಲೆಗಳಲ್ಲಿ, 3 ಸಾವಿರದ ಐನೂರಾ 87 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ, 64 ಯೋಜನೆಗಳಿಗೆ ಅನುಮೋದನೆ ನೀಡಿದೆ. 13 ಸಾವಿರದ 896 ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ ಎಂದು, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ್, ತಿಳಿಸಿದ್ದಾರೆ. ಬೆಂಗಳೂರು, ಬೆಳಗಾವಿ, ತುಮಕೂರು, ಯಾದಗಿರಿ, ಹಾವೇರಿ, ಗದಗ ಹಾಗೂ ಮೈಸೂರು ಜಿಲ್ಲೆಗಳಲ್ಲಿ, ಹೊಸ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ದೊರೆಯಲಿದೆ ಎಂದು, ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸಚಿವರು ಪ್ರಕಟಿಸಿದ್ದಾರೆ.**

<><><>

ಧಾರವಾಡ ಜಿಲ್ಲೆ, ಧಾರವಾಡ ತಾಲೂಕು ಹೊಲ್ತಿಕೋಟೆ, ಬೆಣಚಿ ಹಾಗೂ ಕಲಘಟಗಿ ತಾಲೂಕಿನ ಉಗ್ಗಿನಕೇರಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿ –2020ರ ಅಡಿ, 8 ಲಕ್ಷ ರೂಪಾಯಿ ವೆಚ್ಚದಲ್ಲಿ, ಕೌಶಲಾಭಿವೃದ್ಧಿ ಪ್ರಯೋಗಾಲಯ – ಸ್ಕಿಲ್ಲಿಂಗ್ ಲ್ಯಾಬ್ ಕಾರ್ಯಾರಂಭಿಸಿದೆ. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲೂಕು, ಸರಗೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ, ಧಾರವಾಡ ಜಿಲ್ಲೆಯ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗಾಗಿ, ದಾನಿಗಳ ಸಹಕಾರದಲ್ಲಿ, Skilling Lab ಸ್ಥಾಪಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಎಸ್.ವಿ.ವಾಯ್.ಎಂ. ನ ಪ್ರಾದೇಶಿಕ ಮುಖ್ಯಸ್ಥ ಜಯಂತ್ ಕೆ.ಎಸ್.

<><><>

ಜಯಂತ್ ಕೆ.ಎಸ್. ಧ್ವನಿ 45 ಸೆಕೆಂದುಗಳು

<><><>

ವಿಪತ್ತು ನಿರ್ವಹಣೆಯ ಗುಣಮಟ್ಟ ಉನ್ನತೀಕರಿಸಲು, 3 ಸಾವಿರದ 500 ಕೋಟಿ ರೂಪಾಯಿ ಮೌಲ್ಯದ ಹೊಸ ಯೋಜನೆ ರೂಪಿಸಲಾಗಿದೆ ಎಂದು, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ವಿಶ್ವ ಬ್ಯಾಂಕ್, ಬಿ.ಬಿ.ಎಂ.ಪಿ. ಹಾಗೂ ಜಲ ಮಂಡಳಿಯ ಪ್ರತಿನಿಧಿಗಳೊಂದಿಗೆ, ವಿಧಾನಸೌಧದಲ್ಲಿ ಸಚಿವರು ಸಭೆ ನಡೆಸಿದರು. ವಿಶ್ವ ಬ್ಯಾಂಕ್ 2 ಸಾವಿರ ಕೋಟಿ ರೂಪಾಯಿ ಹೂಡಿಕೆ ಮಾಡಲಿದ್ದು, ರಾಜ್ಯ ಸರ್ಕಾರ ಸಾವಿರದ 500 ಕೋಟಿ ರೂಪಾಯಿ ವೆಚ್ಚ ಮಾಡಲಿದೆ. ಈ ಯೋಜನೆ 2025ರ ಮಾರ್ಚ್ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿದೆ ಎಂದರು.

<><><>

ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಆಸ್ಪತ್ರೆ – ಕಿಮ್ಸ್ ಜೊತೆ, ಹೊಸ ದಿಲ್ಲಿಯ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರದ, ಅತ್ಯಾಧುನಿಕ ವೈರಾಣು ಸಂಶೋಧನಾ ಮತ್ತು ರೋಗ ನಿರ್ಣಯ ನಿದಾನಶಾಸ್ತ್ರ ಪ್ರಯೋಗಾಲಯ, ಒಡಂಬಡಿಕೆಗೆ ಸಹಿ ಹಾಕಿವೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಕಿಮ್ಸ್ ಅವರಣದ 27 ಗುಂಟೆ ಜಾಗೆಯಲ್ಲಿ, 16 ಕೋಟಿ ರೂಪಾಯಿ ವೆಚ್ಚದಲ್ಲಿ, ಕೇಂದ್ರ ಸರ್ಕಾರ ಈ ಪ್ರಯೋಗಾಲಯ ಸ್ಥಾಪಿಸಲಿದೆ ಎಂದು, ಸಚಿವರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ.

<><><>

ಹೆಚ್–1, ಎನ್–I, ಕೊರೋನಾ, ಚಿಕೂನ್ ಗುನ್ಯಾ, ನಿಫಾದಂತಹ ಸಾಂಕ್ರಾಮಿಕ ರೋಗಗಳು, ತಮ್ಮ ಸಂರಚನೆಯಲ್ಲಿ ಬದಲಾವಣೆಗೊಂಡು, ಹರಡುತ್ತಿರುವ ಕಾರಣ, ಸಕಾಲಿಕವಾಗಿ ವೈರಾಣು ಸಂಶೋಧನೆ ಮತ್ತು ರೋಗ ನಿರ್ಣಯ ಕೈಗೊಂಡು, ಆರೋಗ್ಯಾಕಾಂಕ್ಷಿಗಳ ಜೀವ ಉಳಿಸಲು, ಈ ಪ್ರಯೋಗಾಲಯ ಸಹಕಾರಿಯಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

<><><>

ಹುಬ್ಬಳ್ಳಿಯಲ್ಲಿ ಜೀವ ರಕ್ಷ ಟ್ರಸ್ಟ್‌ನ 6ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಇಂದು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಿಮ್ಸ್ ಸಭಾಂಗಣದಲ್ಲಿ, ಬೆಳಗ್ಗೆ 11 ರಿಂದ ಮಧ್ಯಾಹ್ನ 4 ಗಂಟೆಯ ವರೆಗೆ ಜರುಗಲಿದೆ. ಜೀವ ರಕ್ಷ ವಿಶ್ವದ ಮೊದಲ ಸಮಗ್ರ ತುರ್ತು ಆರೈಕೆ ಮತ್ತು ಜೀವನ ಬೆಂಬಲದ ಕಾರ್ಯಕ್ರಮವಾಗಿದೆ.

<><><>

<><><>

## ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ, ಭಾರತದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮೂಲವಾಗಿದೆ ಎಂದು, ಅಂತಾರಾಷ್ಟ್ರೀಯ ಸಂಶೋಧನಾ ವರದಿ ಪ್ರಕಟಿಸಿದೆ ಎಂದು, ಪ್ರಸಾರ ಭಾರತಿ ಅಧ್ಯಕ್ಷ ನವನೀತ್ ಕುಮಾರ್ ಸೆಹೆಗಲ್ ಹೇಳಿದ್ದಾರೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ರಾಯಿಟರ್ಸ್ ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ಜರ್ನಲಿಸಂ, ನಿಂದ ಡಿಜಿಟಲ್ ನ್ಯೂಸ್ ವರದಿ 2024ರ ಸಂಶೋಧನಾ ವರದಿ, ದೃಢಪಡಿಸಿದೆ. ದೇಶದ ಇತರ ಪ್ರಮುಖ ಮಾಧ್ಯಮ ಸಂಸ್ಥೆಗಳಿಗಿಂತ, ಆಕಾಶವಾಣಿ ಗಣನೀಯವಾಗಿ, ಹೆಚ್ಚಿನ ಟ್ರಸ್ಟ್ ಸ್ಕೋರ್ (ವಿಶ್ವಾಸಾರ್ಹತೆ ಅಂಕ) ಪಡೆದಿದೆ ಎಂದು, ವರದಿ ತಿಳಿಸಿದೆ.

<><><>

ಶರಾವತಿ ಮುಳುಗಡೆ ಸಂತ್ರಸ್ಥರು ಹಾಗೂ ಶಿವಮೊಗ್ಗ ಜಿಲ್ಲೆಯ, ಬಗರ್ ಹುಕುಂ ಸಾಗುವಳಿದಾರರ ಹಲವು ದಶಕಗಳ ಸಮಸ್ಯೆಗೆ, ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಕೈಗೊಂಡು, ಮಾತನಾಡಿದರು. ಯಾವುದೇ ಯೋಜನೆಯ ಅನುಷ್ಠಾನದಲ್ಲಿ, ಕಾನೂನು ತೊಡಕು ಬಂದಲ್ಲಿ, ಅಧಿಕಾರಿಗಳು ಕೂಡಲೇ ಅಗತ್ಯ ಮಾಹಿತಿ ಒದಗಿಸಬೇಕು. ಸಂತ್ರಸ್ಥರಿಗೆ ಮಾನವೀಯ ನೆಲೆಯಲ್ಲಿ ನೆರವು ಒದಗಿಸಲು, ಮುಖ್ಯಮಂತ್ರಿಯವರು ಸಿದ್ಧರಿದ್ದಾರೆ. ಜನರಿಗೆ ಅನುಕೂಲವಾಗುವಂತಿದ್ದಲ್ಲಿ ಅಧಿಕಾರಿಗಳು ಸಹಕರಿಸುವಂತೆ, ಸೂಚಿಸಿದರು.

<><><>

"ಪರಿಸರ ಸಂರಕ್ಷಣೆ-ಸುಸ್ಥಿರ ಅಭಿವೃದ್ಧಿ" ವಿಷಯದ ರಾಜ್ಯ ಸಮ್ಮೇಳನ, ನಾಳೆ ಉತ್ತರಕನ್ನಡ ಜಿಲ್ಲೆಯ ಶಿರಸಿಯ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ, ಆಯೋಜಿತವಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವೃಕ್ಷ ಲಕ್ಷ ಆಂದೋಲನದ ಸಂಯೋಜಕ, ಅನಂತ ಹೆಗಡೆ ಅಶೀಸರ.

<><><>

ಅನಂತ ಹೆಗಡೆ ಅಶೀಸರ ಧ್ವನಿ 45 ಸೆಕೆಂದುಗಳು

<><><>

ಕಾರ ಹುಣ್ಣಿಮೆ ಹಬ್ಬದ ಅಂಗವಾಗಿ, ಮುನ್ನೂರು ಕಾಪು ಸಮಾಜದ ಅಧ್ಯಕ್ಷ ಬೆಲ್ಲಂ ನರಸ ರೆಡ್ಡಿ ಆಯೋಜಿಸುವ, 'ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬ' ಕಾರ್ಯಕ್ರಮಕ್ಕೆ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣ ಪ್ರಕಾಶ ಪಾಟೀಲ ಚಾಲನೆ ನೀಡಿದರು. ರಾಯಚೂರಿನ ಅತ್ಯಂತ ಜನಪ್ರಿಯ ಈ ಹಬ್ಬದಲ್ಲಿ, ಎತ್ತುಗಳನ್ನು ಪೂಜಿಸಿ, ಭಾರದ ಕಲ್ಲನ್ನು ಎಳೆಯುವ ಸ್ಪರ್ಧೆ ಆಯೋಜಿಸಲಾಗುತ್ತದೆ. ವರ್ಷವಿಡೀ ತಮ್ಮ ಭೂಮಿಯಲ್ಲಿ ರೈತರು ದುಡಿದು, ಕಾರ ಹುಣ್ಣಿಮೆ ದಿನ, ಸಂಭ್ರಮಿಸುವುದು ಬಲು ಅಪರೂಪ. ಗಣ್ಯರು ಪಾಲ್ಗೊಂಡಿದ್ದರು.

<><><>

ಇದೇ ಸಂದರ್ಭದಲ್ಲಿ, ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಶರಣ ಪ್ರಕಾಶ್ ಪಾಟೀಲ, ನೀಟ್-ಯುಜಿ ಹಾಗೂ ಯುಜಿಸಿ-ನೆಟ್ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳ ತನಿಖೆ, ನಿಷ್ಪಕ್ಷಪಾತವಾಗಿ ಕೇಂದ್ರ ಸರ್ಕಾರ ನಡೆಸಲಿ ಎಂದು, ಆಗ್ರಹಿಸಿದರು.

<><><>

ಧಾರವಾಡದಲ್ಲಿ ಪ್ರಧಾನ ಕಚೇರಿ ಹೊಂದಿರುವ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಅಟಲ್ ಪಿಂಚಣಿ ಯೋಜನೆ ಅನುಷ್ಠಾನದಲ್ಲಿ, ಗಣನೀಯ ಸಾಧನೆಗೈದ ಹಿನ್ನೆಲೆ, ರಾಷ್ಟ್ರ ಪ್ರಶಸ್ತಿಗೆ ಭಾಜನವಾಗಿದೆ. ಹೊಸ ದಿಲ್ಲಿಯಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ, ಬ್ಯಾಂಕ್ ಅಧ್ಯಕ್ಷ ಶ್ರೀಕಾಂತ ಭಂಡಿವಾಡ ಅವರು, ಕೇಂದ್ರ ಸರ್ಕಾರದ, ಹಣಕಾಸು ವಿಭಾಗದ ಕಾರ್ಯದರ್ಶಿ, ಡಾಕ್ಟರ್ ವಿವೇಕ ಜೋಶಿ ಅವರಿಂದ, ಪುರಸ್ಕಾರ ಸ್ವೀಕರಿಸಿದರು.

<><><>

86 ಸಾವಿರದ 350 ಎ.ಪಿ.ವೈ. ಖಾತೆಗಳನ್ನು ಬ್ಯಾಂಕ್ ತೆರೆಸಿದೆ. ವಿಜಯಪುರದಿಂದ ಮಂಗಳೂರಿನ ವರೆಗೆ, ಒಟ್ಟು ಒಂಬತ್ತು ಜಿಲ್ಲೆಗಳ ಕಾರ್ಯ ವ್ಯಾಪ್ತಿ, 629 ಶಾಖೆಗಳು ಹಾಗೂ 36 ಸಾವಿರ ಕೋಟಿ ರೂಪಾಯಿ ವಹಿವಾಟು ಹೊಂದಿದ, ಪ್ರಮುಖ ಗ್ರಾಮೀಣ ಬ್ಯಾಂಕ್ ಎಂದು, ಪ್ರಕಟಣೆ ತಿಳಿಸಿದೆ.

<><><>

ನಿಧನ ವಾರ್ತೆ

<><><>

ಉತ್ತರಕನ್ನಡ ಜಿಲ್ಲೆ, ಜೋಯಿಡಾದ ಖ್ಯಾತ ವೈದ್ಯ, ಡಾಕ್ಟರ್ ಶಿವರಾಮ ಗಂಗೂ ಕಿನ್ನಾರಕರ್ ಹುಬ್ಬಳ್ಳಿಯಲ್ಲಿ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು.  ಸೂಪಾದ ಜನರ ಆರೋಗ್ಯ ಸೇವೆಯಲ್ಲಿ, ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದ ಡಾಕ್ಟರ್ ಕಿನ್ನಾರಕರ್ ನಿಧನಕ್ಕೆ, ಶಾಸಕ ಆರ್.ವಿ.ದೇಶಪಾಂಡೆ ಸಂತಾಪ ಸೂಚಿಸಿದ್ದಾರೆ. ಇಂದು ಬೆಳಗ್ಗೆ 11 ಗಂಟೆಗೆ ಹುಬ್ಬಳ್ಳಿಯ ಕೇಶ್ವಾಪುರ ಮುಕ್ತಿಧಾಮದಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

<><><>

ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ನಾಳೆ ಮತ್ತು ನಾಡಿದ್ದು, ಭಾರಿ ಮಳೆಯಾಗುವ ನಿರೀಕ್ಷೆ ಇದೆ. ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. 20 ಸೆಂಟಿ ಮೀಟರ್‌ಗೂ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ, ಮುನ್ನೆಚ್ಚರಿಕೆ ನೀಡಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ವಿಶ್ವ ಸಂಗೀತ ದಿನವನ್ನು ನಿನ್ನೆ ಆಚರಿಸಲಾಯಿತು. ಸಂಗೀತ ಒಂದು ಸಾರ್ವತ್ರಿಕ ಭಾಷೆ ಎಂಬ ತತ್ವದಡಿ ಈ ದಿನವನ್ನು, ಧಾರವಾಡದ ಡಿಮ್ಹಾನ್ಸ್‌ನಲ್ಲಿ ವಿಶೇಷವಾಗಿ, ಆಚರಿಸಲಾಯಿತು.

<><><>

ಉತ್ತರಕನ್ನಡ ಜಿಲ್ಲೆ, ಜೋಯಿಡಾ ತಾಲೂಕಿನ ಗಣೇಶಗುಡಿಯಲ್ಲಿ, ರಾಷ್ಟ್ರೀಯ ಕೆನೋ ಪಂದ್ಯಾವಳಿ ಮತ್ತು ರಾಷ್ಟ್ರೀಯ ಕಯಾಕ್ ಕ್ರಾಸ್ ಪಂದ್ಯಾವಳಿಯಲ್ಲಿ ವಿಜೇತ ಕ್ರೀಡಾಪಟುಗಳನ್ನು, ಶಾಸಕ ಆರ್.ವಿ. ದೇಶಪಾಂಡೆ ಗೌರವಿಸಿದರು.

<><><>

ಬಳ್ಳಾರಿ ಪಾಲಿಕೆಯ, ನೂತನ ಮೇಯರ್ ಆಗಿ ಮುಲ್ಲಂಗಿ ನಂದೀಶ್ ಮತ್ತು ಡಿ.ಸುಕುಂ ಉಪ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.

<><><>

ರಾಜ್ಯ ಆಹಾರ ಆಯೋಗದ ಅಧ್ಯಕ್ಷ, ಡಾಕ್ಟರ್ ಎಚ್.ಕೃಷ್ಣ, ನೇತೃತ್ವದ ತಂಡ, ಮೈಸೂರು ಜಿಲ್ಲೆಯಲ್ಲಿ, ಮೂರು ದಿನಗಳ ಕಾಲ ಸಂಚರಿಸಿ, ಜನರ ಅಹವಾಲು ಆಲಿಸಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ರಾಜ್ಯದ 7 ಜಿಲ್ಲೆಗಳ, 64 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ; 13 ಸಾವಿರ ಉದ್ಯೋಗಗಳ ಸೃಷ್ಟಿ – ಎಂ.ಬಿ.ಪಾಟೀಲ.
- ವಿಪತ್ತು ನಿರ್ವಹಣೆ ಗುಣಮಟ್ಟ ಉನ್ನತೀಕರಣ; ಮೂರೂವರೆ ಸಾವಿರ ಕೋಟಿ ರೂಪಾಯಿ ಮೌಲ್ಯದ, ಹೊಸ ಯೋಜನೆ – ಕೃ ್ಣ ಬೈರೇಗೌಡ.
- ಹುಬ್ಬಳ್ಳಿಯ, ಕಿಮ್ಸ್ ಜೊತೆ, ಹೊಸ ದಿಲ್ಲಿಯ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ, ಒಡಂಬಡಿಕೆ – ಪ್ರಲ್ಹಾದ ಜೋಶಿ.
- ಶರಾವತಿ ಮುಳುಗಡೆ ಸಂತ್ರಸ್ಥರಿಗೆ, ಮಾನವೀಯ ನೆಲೆಯಲ್ಲಿ ನೆರವು ಒದಗಿಸಲು, ಮುಖ್ಯಮಂತ್ರಿಯವರು ಸಿದ್ಧ – ಮಧು ಬಂಗಾರಪ್ಪ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ